Ex.ನಂ.14/2027
ಪಿ.ಡಬ್ಲ್ಯೂ-01

**ಸಾಕ್ಷಿಯನ್ನು ದಿಃ 07.03.2025 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವೆರದ ಪಾಟೀ ಸವಾಲುಃ ಡಿಕ್ರಿ ಹೋಲ್ಡರ್ ಪರ ಶ್ರೀ. ಎಸ್.ಪಿ.ಕೆ. ವಕೀಲರಿಂದ.**

ಸಾಕ್ಷಿ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ನನಗೆಇಂಗ್ಲೀಷ ಓದಲು ಬರುವುದಿಲ್ಲ ಆದರೆ ಸಾಕ್ಷಿ ಪ್ರಮಾಣ ಪತ್ರದಲ್ಲಿಇರುವ ಅಂಶಗಳು ನಾನು ಓದಿಸಿ ತಿಳಿದುಕೊಂಡಿರುತ್ತೇನೆ. ಬೇರೆ ಬೇರೆ ಆಸ್ತಿಗಳು ಇರುವ ಬಗ್ಗೆ ತೋರಿಸಲು ಈ ದಿನ ನ್ಯಾಯಾಲಯಕ್ಕೆ ಪಹಣಿ ಪತ್ರಿಕೆ ಮತ್ತು ಎಂ.ಆರ್ ತಂದಿರುವುದಿಲ್ಲ. ನಂಜೆಗೌಡ ಮತ್ತು ಸಿದ್ದಗಂಗಯ್ಯ ಅವರು ಇವತ್ತಿಗೂ ಸಹ ಕರೆಕಲ್ಲು ಪಾಳ್ಯದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ಕರೆಕಲ್ಲು ಪಾಳ್ಯದಲ್ಲಿ ಜಮೀನುಗಳು ಇದ್ದು ನನ್ನ ಮದುವೆ ಆಗಿ ಸುಮಾರು ವರ್ಷಗಳಾಗಿರುವುದರಿಂದ ಎಷ್ಟು ಎಕರೆ ಜಮೀನು ಇದೆ ಮತ್ತು ಏನು ಬೆಳೆ ಬೆಳೆದಿರುತ್ತಾರೆಂದು ನನಗೆ ಗೊತ್ತಿಲ್ಲ. ಕರಿಕಲ್ಲು ಪಾಳ್ಯದಲ್ಲಿ 3 – 4 ಕಡೆ ಜಮೀನು ಇದೆಯಾ ಎಂದರೆ ಸಾಕ್ಷಿ ಇರಬಹುದುದೆಂದು ಹೇಳುತ್ತಾರೆ. ಕರಿಕಲ್ಲು ಪಾಳ್ಯದಲ್ಲಿ ಸುಮಾರು 10 ಎಕರೆ ಜಮೀನು ಇರಬಹುದು. ಕರೆಕಲ್ಲುಪಾಳ್ಯದಲ್ಲಿರುವ ಆಸ್ತಿಗಳನ್ನು ಕೆಳ ನ್ಯಾಯಾಲಯದಲ್ಲಿ ಸಲ್ಲಿಸಿರುವ ದಾವೆಯಲ್ಲಿ ಸೇರಿಸಿರುವುದಿಲ್ಲ.

ಸಿದ್ದಗಂಗಯ್ಯ ಮತ್ತು ನಂಜೇಗೌಡ ಅವರು ಮಾಡಿಕೊಟ್ಟಿರುವ ಕರಾರು ಪತ್ರದ ಆಸ್ತಿಗೆ ಸಂಬಂಧಿಸಿದಂತೆ ದಾವೆ ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿ ಗೊತ್ತಿಲ್ಲವೆಂದು ಹೇಳುತ್ತಾರೆ. ಈ ಪ್ರಕರಣದಲ್ಲಿ ಸಿದ್ದಗಂಗಯ್ಯ ಮತ್ತು ನಂಜೆಗೌಡ ಅವರಿಗೆ ಸಮಸ್ಸ ಜಾರಿ ಆಗಿತ್ತು ಎಂದರೆ ಸರಿ. ಅವರ ಪರವಾಗಿ ವಕೀಲರನ್ನು ಇಟ್ಟಿಲ್ಲವೆಂದರೆ ನಾನು ಇಟ್ಟಿದ್ದೇನೆಂದು ಹೇಳುತ್ತಾರೆ. ಸಿದ್ದಗಂಗಯ್ಯ ,ಅನ್ನಪೂರ್ಣ ಮತ್ತು ಪ್ರತಾಪ್ ಅವರು ರಾಮಕೃಷ್ಣ ಅವರಿಗೆ ಮಾರಾಟ ಮಾಡಿದ ನಂತರ ಪಹಣಿ ಮತ್ತು ಈಸಿಯನ್ನು ಸಾಕ್ಷಿಗೆ ತೋರಿಸಿ ಕೇಳಲಾಗಿ ಸಾಕ್ಷಿ ಒಪ್ಪಿಕೊಂಡಿದ್ದು **ಅವುಗಳನ್ನು ನಿ.ಡಿ 1 ಮತ್ತು 2 ಎಂದು ಗುರುತಿಸಲಾಯಿತು**.

2022 ರಲ್ಲಿ ನಾನು ದಾವೆ ಸಲ್ಲಿಸಿದ ನಂತರ  ಸಿದ್ದಗಂಗಯ್ಯ ಅವರು ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರದ ಆಸ್ತಿಯನ್ನು ಕೆಳ ನ್ಯಾಯಾಲಯದಲ್ಲಿ ಸಲ್ಲಿಸಿರುವ ದಾವೆಯಲ್ಲಿ ಸೇರಿದ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಈ ಕೇಸಿನ ಬಗ್ಗೆ ಏನು ಮಾಹಿತಿ ಇಲ್ಲ ನಂಜೆಗೌಡ ಮತ್ತು ಸಿದ್ದಗಂಗಯ್ಯ ಅವರ ಮಾತು ಕೇಳಿ ನಾನು ಈ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಡಿಕ್ರಿ ಹೋಲ್ಡರ್ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಹಾಗಾಗಿ ಸಿದ್ದಗಂಗಯ್ಯ ಮತ್ತು ನಂಜೆಗೌಡ ಅವರು ನ್ಯಾಯಾಲಯದ ಮುಂದೆ ಹಾಜರು ಆಗಿಲ್ಲವೆಂದರೆ ಸರಿಯಲ್ಲ.  ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸಹ  ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕೆಳ ನ್ಯಾಯಾಲಯದಲ್ಲಿ ಓಎಸ್ 223/2017 ದಾವೆಯಲ್ಲಿ ಈ ಅರ್ಜಿಯ ಆಸ್ತಿಗಳನ್ನು ಮಾತ್ರ ಸೇರಿದ್ದು ಬೇರೆ ಆಸ್ತಿಗಳನ್ನು ಸೇರಿಸಿಲ್ಲವೆಂದರೆ ಸರಿಯಲ್ಲ. ನನಗೆ ಪ್ರಮಾಣ ಪತ್ರದಲ್ಲಿ ಮಾಹಿತಿ ಬರೆಸಲು ಏನು ಗೊತ್ತಿರಲಿಲ್ಲ ಸಿದ್ದಗಂಗಯ್ಯ ಮತ್ತು ನಂಜೆಗೌಡ ಅವರು ಮಾತು ಕೇಳಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ

ಕುಣಿಗಲ್.